# ಕೆರೆಗಳನ್ನು ಉಳಿಸಲು ಸಂಕಲ್ಪ ತೊಡಿ

## ಸಮ್ಮೇಳನದಲ್ಲಿ ಕೇಂದ್ರ ಸಚಿವರ ಕರೆ

ಕನ್ನಡಪ್ರಭ, 14/11/2014, Page No:11

**ಶಿರಸಿ, ನ. 13:** ಇಂದು ಅಂತರ್‌ಜಲ ಕಳೆದು ಹೋಗುತ್ತಿದೆ, ಕಲುಷಿತಗೊಳ್ಳುತ್ತಿದೆ. ಅಂತರ್ ಜಲ ಉಳಿಸುವ ಚಿಂತನೆ ಮಾಡಬೇಕು. ಕೆರೆ ಸಮ್ಮೇಳನದಲ್ಲಿ 'ಕೆರೆಯ ನೀರನ್ನು ಕೆರೆಗೆ ಚೆಲ್ಲುವ' ಎಂದು ಸಂಕಲ್ಪ ಮಾಡಬೇಕು ಎಂದು ಕೇಂದ್ರ ರಾಸಾಯನಿಕ ಮತ್ತು ಗೊಬ್ಬರ ಸಚಿವ ಅನಂತಕುಮಾರ ಹೇಳಿದರು.

ಅವರು ಗುರುವಾರ ತಾಲೂಕಿನ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಸುಧರ್ಮ ಸಭಾಗೃಹದಲ್ಲಿ ಪಶ್ಚಿಮಘಟ್ಟದ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ-ನಿರ್ವಹಣೆ ಕುರಿತು ಕೆರೆ ಸಮ್ಮೇಳನ-2014 ಉದ್ಘಾಟಿಸಿ ಮತ್ತು ಅಧ್ಯಯನಗಳ ವರದಿ ಬಿಡುಗಡೆ ಮಾಡಿ ಮಾತನಾಡಿದರು.

ಕೆರೆಗಳು ಪರಿಸರ ಮತ್ತು ಅಂತರ್ ಜಲದ ಕೀಲಿಕೈಗಳು. ನೀರಾವರಿ ಹಾಗೂ ಕುಡಿಯುವ ನೀರಿನ ಮೂಲ ಕೀಲಿ ಕೈಗಳಾದ ಕೆರೆಗಳ ಸಂರಕ್ಷಣೆ ಮಾಡಿ ಪುನರುಜ್ಜೀವನಗೊಳಿಸಿದರೆ ಜನವಸತಿಗೆ ಅನುಕೂಲ. ಜೀವ ಜಲ ನೀಡಬಹುದು. ಅನೇಕ ಹಳ್ಳಿಗಳು ಜೋಡು ಕೆರೆಗಳನ್ನು ಹೊಂದಿದೆ. ಆದರೆ ಅವು ಇಂದು ಕಲ್ಮಶಗಳ ಗುಂಡಿ ಆಗಿದೆ. ನಾವು ಇಂದು ಭೂತಾಯಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಮತ್ತೊಂದು ಗ್ರಹಕ್ಕೆ ಹೋಗುವ ಸಿದ್ಧತೆ ನಡೆಸಿದ್ದೇವೆ. ನಮ್ಮ ಮಾತೃ ಭೂಮಿಯ ನಿರ್ಲಕ್ಷ್ಯ ಮಾಡುತ್ತಿದ್ದೇವೆ. ಈ ಭೂಮಿ ಮಾತೆಯನ್ನು ಪೂಜಿಸಿ ಮರಳಿ ಅದರ ಶಕ್ತಿ, ಸಾಮರ್ಥ್ಯ ಹೆಚ್ಚಿಸಬೇಕಿದೆ. ಪ್ರಧಾನಿ ಮೋದಿ ಸರಕಾರದಿಂದ ಗಂಗಾ ಶುದ್ಧೀಕರಣ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಈ ನೆಪದಲ್ಲಿ ಆ ಭಾಗದ ಕೆರೆಗಳ ಶುದ್ಧೀಕರಣ ಆಗಲಿದೆ ಎಂದರು.



ಸೋಂದಾದಲ್ಲಿ ನಡೆದ ಕೆರೆ ಸಮ್ಮೇಳನ-2014ನ್ನು ಕೇಂದ್ರ ರಾಸಾಯನಿಕ ಮತ್ತು ಗೊಬ್ಬರ ಸಚಿವ ಅನಂತಕುಮಾರ ಉದ್ಘಾಟಿಸುತ್ತಿರುವುದು.

### ■ ಬೆಂಗಳೂರು ಕೆರೆಗಳು ಭೂಗಳ್ಳರ ಪಾಲು!

ಕರ್ನಾಟಕದ ಕೆರೆಗಳ ಅಭಿವೃದ್ಧಿ ಆಗಬೇಕು. ನಾಡಗೌಡ ಕೆಂಪೇಗೌಡರು ಕೆರೆಗಳನ್ನು ಸ್ಥಾಪಿಸಿದ್ದರು. ಅದೊಂದು ವಾತಾನುಕೂಲಿತ ಊರಾಗಿತ್ತು. ಭೂಮಾಫಿಯಾದಿಂದ ಬೆಂಗಳೂರಿನಲ್ಲಿ ಅನೇಕ ಕೆರೆಗಳು ಭೂಗಳ್ಳರ ಪಾಲಾಗುತ್ತಿದೆ. ಕೆರೆ ಸಂರಕ್ಷಣೆಗೆ ನಾವು ಮುಂದಾಗಿದ್ದೇವೆ. ಕೆರೆ ಸ್ವಚ್ಛಗೊಳಿಸಲು ಟಿ.ಬಿ.ರಾಮಚಂದ್ರ, ಹರೀಶ ಅವರುಗಳ ತಂಡ ನೀಲಿ ನಕಾಶೆ ನೀಡಿದೆ. ಅವುಗಳನ್ನು ಕಾರ್ಯ ರೂಪಕ್ಕೆ ತರಲು ಕೇಂದ್ರ ಸರಕಾರ ಕಾರ್ಯ ರೂಪಿಸಲಿದೆ ಎಂದ ಅವರು, ಎಲ್ಲಿಯ ತನಕ ಜನಪ್ರತಿನಿಧಿಗಳು ಹಸಿರು ಜೀವನ ಶೈಲಿಯನ್ನು ಅನ್ವಯಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಆರೋಗ್ಯ ಸಮಸ್ಯೆಗಳೂ ಮುಂದುವರಿಯುತ್ತವೆ. ಭಾರತೀಯ ಜೀವನಶೈಲಿಗೆ ವಿರುದ್ಧವಾದ ಜೀವನಶೈಲಿ ಇಂದು ದೇಶದ ಜನರ ಆರೋಗ್ಯ ಸಮಸ್ಯೆಗೆ ಕಾರಣವಾಗಿದೆ. ಜೀವನಶೈಲಿಯಿಂದಲೇ ಅನೇಕ ಕಾಯಿಲೆಗಳು ಹುಟ್ಟಿವೆ. ಇದರಿಂದಾಗಿ ಪ್ರಕೃತಿಗೂ ತೊಂದರೆಯಾಗಿದೆ ಎಂದರು.

ನಾವು ಹಸಿರು ಸ್ವಾಮಿ (ಸ್ವರ್ಣವಲ್ಲಿ ಮಹಾಸಂಸ್ಥಾನದ ಮಠಾಧೀಶ ಶ್ರೀಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮೀಜಿ) ಸಾನಿಧ್ಯದಲ್ಲಿದ್ದೇವೆ.

ಅವರು ಬೇಡ್ತಿ, ಅಘನಾಶಿನಿ ಆಣೆಕಟ್ಟೆ ವಿರುದ್ಧ ಹೋರಾಡಿದ್ದಕ್ಕಾಗಿ ಇವರಿಗೆ ಹಸಿರು ಸ್ವಾಮೀ ಎಂದೇ ಹೆಸರು ಬಂದಿದೆ. ಆ ಯೋಜನೆಗಳನ್ನು ತಡೆಯುವಲ್ಲಿ ಸ್ವಾಮೀಜೀ ಯಶಸ್ವಿಯಾಗಿದ್ದಾರೆ. ಎಂದು ಕೇಂದ್ರ ಸಚಿವ ಅನಂತಕುಮಾರ, ಬೆಂಗಳೂರು ನುಡಿದರು.

ಕಾರ್ಯಕ್ರಮದಲ್ಲಿ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಮಠಾಧೀಶ ಶ್ರೀಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮೀಜಿ, ಎಂದು ಬೆಂಗಳೂರು ವಾಗ್ದೇವಿ ವಿಲಾಸ ಸಂಸ್ಥೆ ಅಧ್ಯಕ್ಷ ಹರೀಶ, ಶಿವಮೊಗ್ಗದ ಪ್ರೊ.ಬಿ.ಎಂ.ಕುಮಾರಸ್ವಾಮಿ. ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ, ಡಾ.ಸುಭಾಸ ಚಂದ್ರನ್, ಬಿ.ಎಚ್.ರಾಘವೇಂದ್ರ, ಡಾ.ಟಿ.ವಿ.ರಾಮಚಂದ್ರ, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಹಾಗು ಇತರರು ಉಪಸ್ಥಿತರಿದ್ದರು.

ಈ ಕೆರೆ ಸಮ್ಮೇಳನದ ನಿರ್ಣಯಗಳನ್ನು ಕೇಂದ್ರ ಜಲ ಸಂಪನ್ಮೂಲ ಸಚಿವರು, ತಜ್ಞರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳೋಣ. ಕೇಂದ್ರ ಅರಣ್ಯ, ಪರಿಸರ ಸಚಿವರೊಂದಿಗೆ ಚರ್ಚಿಸಿ ಇಲ್ಲಿಯ ನಿರ್ಣಯಗಳನ್ನು ಅಳವಡಿಸಲು ನಮ್ಮ ಸರಕಾರ ಸಿದ್ಧವಾಗಿದೆ.

ನಾವು ನಮ್ಮ ಜೀವನ ಶೈಲಿ ಬದಲಾಯಿಸಲು ಶಕ್ತರಾಗಿದ್ದೇವೆ. ಮುಂದಿನ ವರ್ಷದಿಂದ ಮಧ್ಯಪ್ರದೇಶ ಸರಕಾರ ಹಸಿರು ಜೀವನ ಶೈಲಿ ಪಠ್ಯಕ್ರಮವನ್ನು ಶಿಕ್ಷಣದಲ್ಲಿ ಅಳವಡಿಸಲಿದೆ. ಸೋಲಾರ ಬಳಕೆ, ಹಸಿರು ಗಾರ್ಡನ್ ರೂಫ್, ಪ್ಲಾಸ್ಟಿಕ್ ಬಳಕೆ ಕಡಿಮೆಗೊಳಿಸುವ ಕಾರ್ಯ ಮಾಡಬೇಕು. ಸ್ವಚ್ಛ ಭಾರತದಲ್ಲಿ ಹಸಿರು ಭಾರತ ಮಾಡುತ್ತೇವೆ ಎನ್ನುವ ಸಂಕಲ್ಪ ಮಾಡೋಣ. ಕೆರೆ ಸಂರಕ್ಷಣೆ ಹೊಣೆ ಹೊರಲು ಸ್ವಚ್ಛ ಹಸಿರು ಭಾರತ ಮಾಡೋಣ ಎಂದು ಕೇಂದ್ರ ಸಚಿವರು ಕರೆ ನೀಡಿದರು.